ಸಿಸಿ ನಂಃ 2671/2021
ಸಿ.ಡ್ಯೂ 13/ಪಿ.ಡಬ್ಲ್ಯೂ 8

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

**ಸಿಸಿ ನಂಃ 2671/2021**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಪ್ರತಿಭಾ |
| ಗಂಡನ ಹೆಸರು | ಃ | ಬಸವಕುಮಾರ |
| ವಯಸ್ಸು | ಃ | 34 ವರ್ಷ |
| ಉದ್ಯೋಗ | ಃ | ಮಹಿಳಾ ಪೋಲಿಸ್ ಪೇದೆ, ಕೆ ಬಿ ಕ್ರಾಸ್ ತಿಪಟುರ , ಪೋಲಿಸ್ ಠಾಣೆ |
| ವಾಸ ಸ್ಥಳ | ಃ | ತುಮಕೂರ . |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **22-03-2024**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ನಾನು 2016 ರಿಂದ 2020 ವರೆಗೆ ಮಾಗಡಿ ರೊಡ್ ಪೋಲಿಸ್ ಠಾಣೆಯಲ್ಲಿ ಮಹಿಳಾ ಪೋಲಿಸ್ ಪೇದೆ ಎಂದು ಕರ್ತವ್ಯ ನಿರ್ವಹಿಸಿರುತೇನೆ .

ಈ ಪ್ರಕರಣ ಆರೋಪಿ ಸಲಿಮ ಇರಾಣಿ ಎನ್ನುವವನನ್ನು ನಮ್ಮ ಠಾಣೆಯ ಸಿಬ್ಬಂದಿಗಳು ನಮ್ಮ ಠಾಣಾ ಗುನ್ನಾ ನಂಃ 158/2020 ಮತ್ತು 169/2020 ರ ತನಿಖೆಗಾಗಿ ಧಾರವಾಡಕ್ಕೆ ಬಂದಾಗ ಸದರಿ ಆರೋಪಿ ನಮ್ಮ ಸಿಬ್ಬಂದಿಗಳ ಮೇಲೆ ಹಲ್ಲೆ ಮಾಡಿದ್ದ . ಆ ಬಗ್ಗೆ ಧಾರವಾಡ ಶಹರ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು . ಸದರಿ ಆರೋಪಿತನನ್ನು ಧಾರವಾಡ ಶಹರ ಪೋಲಿಸರು ದಸ್ತಗಿರಿ ಮಾಡಿದಾಗ ನಮ್ಮ ಠಾಣೆಯ ಸದರ ಪ್ರಕರಣ ವಿಚಾರಣೆಗಾಗಿ ಸದರಿ ಆರೋಪಿತನನ್ನು ಬಾಡಿ ವಾರಂಟ್ ಮೇಲೆ ಪಡೆದುಕೊಂಡು ವಿಚಾರಣೆಗಾಗಿ ನಮ್ಮ ಠಾಣೆಗೆ ಕರೆದುಕೊಂಡು ಬಂದಿದ್ದರು. ಸದರಿ ಆರೋಪಿತನನ್ನು ವಿಚಾರಿಸಿದಾಗ ಆತನ ಬೆಂಗಳೂರಿನ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಮತ್ತು ಇತರೆ ಸ್ಥಳಗಳಲ್ಲಿ ಮಹಿಳೆಯ ಸರ ಸುಲಿಗೆ ಮಾಡಿ ಅಪರಾಧ ಮಾಡಿರುವುದು ತಿಳಿದು ಬಂದಿತ್ತು . ಸದರಿ ಆರೋಪಿ ತನ್ನ ಜೊತೆ ಇತರೇ

ಆರೋಪಿತರು ಶಾಮಿಲಾಗಿದ್ದಾರೆ ಎಂದು ಹೇಳಿದ್ದ . ಆದ್ದರಿಂದ ಸದರಿ ಆರೋಪಿತರ ಪತ್ತೆಗಾಗಿ ನಾನು ಮತ್ತು ವಿಜಯ ನಗರ ಪೋಲಿಸ್ ಠಾಣೆಯ ಅಪರಾಧ ದಳದ ಸಿಬ್ಬಂದಿಗಳಾದ ಚಾಸಾ-14 ರಿಂದ 21, ರವರು ಹಾಗೂ ಇತರೇ ಸಿಬ್ಬಂದಿಗಳು ಸೇರಿ ಧಾರವಾಡಕ್ಕೆ ಬಂದಿದ್ದೆವು . ನಾವು ಧಾರವಾಡದಲ್ಲಿರುವ ಇರಾಣಿ ಕಾಲನಿಗೆ ಹೋಗಿದ್ದೆವು . ಅಲ್ಲಿ ಅವುನು ಇರಾಣಿ , ಆಜಾದ ಇರಾಣಿ , ಭಾನು ಇರಾಣಿ , ಪಾತಿಮಾ ಅಕ್ತರ ಮತ್ತು ಗುಲ್ಜಾರ ರವರನ್ನು ವಿಚಾರಣೆಗಾಗಿ ನಮ್ಮ ಠಾಣೆಗೆ ಕರೆದುಕೊಂಡು ಹೋಗಿದ್ದೆವು . ಆ ಬಗ್ಗೆ ನಾನು ತನಿಖಾಧಿಕಾರಿಗಳ ಮುಂದೆ ನನ್ನ ಹೇಳಿಕೆ ನೀಡಿರುತ್ತೇನೆ . ಆ ದಿನ ನಾವು ವಿಚಾರಣೆಗೆ ಕರೆದುಕೊಂಡು ಹೋದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಅವರ ಹೆಸರು ಭಾನು ಇರಾಣಿ ಹಾಜರಿದ್ದಾರೆ ಎಂದು ಉತ್ತರಿಸಿರುತ್ತಾರೆ .

**ಪಾಟೀಸವಾಲು ಃ 1 ನೇ ಆರೋಪಿ ಪರ ಶ್ರೀ ಸಿ ಎ ಎಂ ವಕೀಲರಿಂದ**

ಸಲಿಮ ಇರಾಣಿ ಆರೋಪಿತನಾಗಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಆತ ಇರಾಣಿ ಕಾಲನಿಯಲ್ಲಿನ ಇತರೇ ಆರೋಪಿತರು ಭಾಗಿಯಾಗಿದ್ದರು ಎಂದು ಹೇಳಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಆತ ಬೆಂಗಳೂರು ಮತ್ತು ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಸರಗಳ್ಳತನ ಮಾಡುತ್ತಿದ್ದ ಎಂದು ಹೇಳಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**ಪಾಟೀಸವಾಲು ಃ 3 ಮತ್ತು 4 ನೇ ಆರೋಪಿ ಪರ ಶ್ರೀ ಐ ಐ ಎಸ್ ವಕೀಲರಿಂದ**

ನಾವು ಬೆಂಗಳೂರಿನಿಂದ ಧಾರವಾಡಕ್ಕೆ ಬಂದ ಗುನ್ನಾ ನಂಬರ ನನಗೆ ನೆನಪಿಲ್ಲ . ಚಾಸಾ-16 ರಿಂದ 32 ಪೋಲಿಸ ಸಿಬ್ಬಂದಿಗಳು ಎಂದರೆ ಸರಿ . ಉಳಿದ ಪೋಲಿಸ ಸಿಬ್ಬಂದಿಗಳು ಬಂದ ವಾಹನ ನಂಬರ ನನಗೆ ಗೊತ್ತಿಲ್ಲ . ಆ ದಿನ ಇರಾಣಿ ಕಾಲನಿಯಲ್ಲಿ ನಾವು ಆರೋಪಿತರನ್ನು ಬೆಃ 9.00 ಗಂಟೆಗೆ ದಸ್ತಗಿರಿ ಮಾಡಿದ್ದೆವು .

ಸದರಿ ಎಲ್ಲಾ ಆರೋಪಿತರನ್ನು ಯಾವ ಸ್ಥಳಗಳಲ್ಲಿ ದಸ್ತಗಿರಿ ಮಾಡಿದ್ದೆವೋ , ಇಲ್ಲವೋ ನನಗೆ ಗೊತ್ತಿಲ್ಲ . ಆ ದಿನ ಆರೊಪಿತರನ್ನು ನಾವು ದಸ್ತಗಿರಿ ಮಾಡಿದ್ದರು ಸಹ ಇರಾಣಿ ಕಾಲನಿಯಲ್ಲಿ ಅವರನ್ನು ದಸ್ತಗಿರಿ ಮಾಡಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**ಪಾಟೀಸವಾಲು ಃ 2 ನೇ ಆರೋಪಿ ವಕೀಲರು ಮೇಲಿನ ಪಾಟೀಸವಾಲನ್ನು ಅನುಕರಿಸಿಕೊಂಡಿರುತ್ತಾರೆ .**

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

3 ನೇ ಹೆ ಹಿ ದಿ ನ್ಯಾಹಾಗೂ ಸಿಜೆಎಂ., ಧಾರವಾಡ.